ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 22.02.2024.
**<u>ಪಾಟೀ ಸವಾಲುಃ ವಾದಿ ಪರ ಶ್ರೀ ಪಿ.ಎನ್.ಎಸ್. ವಕೀಲರಿಂದಃ</u>**

2 ನೇ ವಾದಿ ನನ್ನ ಅಣ್ಣನ ಹೆಂಡತಿ ಇರುತ್ತಾರೆ. 1 ನೇ ವಾದಿ ನನ್ನ ಅಣ್ಣ ಅಂಬಾರಾಯನ ಮಗ ಇರುತ್ತಾನೆ. ನನ್ನ ತಂದೆ ಸಾಯಿಬಣ್ಣ ರವರಿಗೆ ಇಬ್ಬರು ಗಂಡು ಮಕ್ಕಳು, ಒಬ್ಬ ಹೆಣ್ಣು ಮಗಳು ಇರುತ್ತಾರೆ. ಸಾಯಿಬಣ್ಣ ಶ್ರೀಮಂತ ವ್ಯಕ್ತಿ ಇದ್ದ ಎಂದರೆ ಸರಿಯಲ್ಲ. ನನ್ನ ತಂದೆ ಸಾಯಿಬಣ್ಣ ನಮ್ಮ ಸುತ್ತ-ಮುತ್ತಲಿನ ಗ್ರಾಮಗಳಲ್ಲಿ ಲೇವಾ-ದೇವಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಒಳ್ಳೆಯ ಫಲವತ್ತಾದ ಜಮೀನು ಇರುತ್ತವೆ ಎಂದರೆ ಸರಿಯಲ್ಲ. ದಾವಾ ಜಮೀನುಗಳ ಪೈಕಿ ಒಂದು ಭೂಮಿಯಲ್ಲಿ ಕಾಲುವೆ ಇದೆ ಎಂದರೆ ಸರಿ. ಅದೇ ರೀತಿ ಭೂಮಿಯನ್ನು ಒಂದು ಬಾವಿ ಇದೆ ಎಂದರೆ ಸರಿ.

ನನ್ನ ತಂದೆ ಸಾಯಿಬಣ್ಣ ಇರುವವರೆಗೂ ಒಳ್ಳೆಯ ರೀತಿ ಸಾಗುವಳಿ ಮಾಡುತ್ತಿದ್ದರು ಹಾಗೂ ದಾವಾ ಜಮೀನುಗಳಿಂದ ಒಳ್ಳೆಯ ಉತ್ಪನ್ನ ಇತ್ತು ಎಂದರೆ ಸರಿಯಲ್ಲ. ಸುಮಾರು 14 ವರ್ಷಗಳ ಹಿಂದೆ ದಾವಾ ಜಮೀನುಗಳು ಮಾರಾಟ ಮಾಡಿದರೆ ಎಕರೆಗೆ ರೂ.4 ಲಕ್ಷ ಬೆಲೆ

ಬಾಳುತ್ತಿದ್ದವು ಎಂದರೆ ಸರಿ. ದಾವಾ ಜಮೀನುಗಳ ಪೈಕಿ ಸರ್ವೆ ನಂ.302 ರಲ್ಲಿ ಒಂದು ರಿಂಗ್ ರಸ್ತೆ ಹೋಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನು ವಿ.ಕೆ. ಸಲಗರ ರಸ್ತೆಗೆ ಲಗತ್ ಆಗಿದೆ ಎಂದು ನುಡಿಯುತ್ತಾರೆ. ನನ್ನ ತಂದೆ ಸಾಯಬಣ್ಣ ಇರುವವರೆಗೂ ಅವರಿಗೆ ಯಾವತ್ತು ಖರ್ಜಾ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಇರುವವರೆಗೂ ಯಾವತ್ತು ಅವರಿಗೆ ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ಇರುವವರೆಗೂ ನಮ್ಮ ಕುಟುಂಬದ ಏಕತ್ರ ಕುಟುಂಬ ಆಗಿತ್ತು ಎಂದರೆ ಸರಿಯಲ್ಲ. ನನ್ನ ಅಣ್ಣ ಅಂಬಾರಾಯ ರವರಿಗೆ 2 ನೇ ವಾದಿ ಒಬ್ಬಳೆ ಮದುವೆ ಹೆಂಡತಿ ಎಂದರೆ ಸರಿ. ನನ್ನ ಅಣ್ಣ ಅಂಬಾರಾಯ ಲಲಿತಾಬಾಯಿ ಎಂಬುವವರ ಜೊತೆ ಸಂಬಂಧ ಇಟ್ಟುಕೊಂಡು ಅವಳ ಜೊತೆ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಲಲಿತಾಬಾಯಿ ಸಂಬಂಧ ಇಟ್ಟುಕೊಂಡಿದ್ದರಿಂದ ತನ್ನ ಹೆಂಡತಿ ಮಕ್ಕಳಾದ ವಾದಿಯರನ್ನು ಹೊಡೆದು ಹೊರಹಾಕಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಸಾಯಬಣ್ಣ ಇರುವವರೆಗೂ ನಮ್ಮ ಅಣ್ಣ-ತಮ್ಮಂದಿರ ಮಧ್ಯ ಯಾವುದೇ ಹಂಚಿಕೆಯಾಗಿಲ್ಲ ಎಂದರೆ ಸರಿಯಲ್ಲ.

ಸುಮಾರು 2000 ನೇ ಸಾಲಿನಲ್ಲಿ ಸದರಿ ಹಂಚಿಕೆ ಆಗಿರಬಹುದು, ಯಾಕೆಂದರೆ ಊರಲ್ಲಿ ಹಿರಿಯರು ಮಾತನಾಡುತ್ತಿದ್ದರು. ನನಗೆ ಹೆಂಚಿಕೆಯಾದ ಬಗ್ಗೆ ಸ್ವಂತ ಆಗಿ ಗೊತ್ತಿರುವುದಿಲ್ಲ, ಆದರೆ ಹಿರಿಯರು ಮಾತನಾಡಿದ್ದನ್ನು ನಾನು ತಿಳಿದುಕೊಂಡು ಹೇಳುತ್ತಿದ್ದೇನೆ. ನನ್ನ ಬಳಿ ಹಂಚಿಕೆಯಾದ ಬಗ್ಗೆ ದಾಖಲೆ ಇರುತ್ತದೆ. ಸದರಿ ಕಾಗದವನ್ನು ನನ್ನ ವಕೀಲರ ಬಳಿ ಕೊಟ್ಟಿರುತ್ತೇನೆ. ಸದರಿ ಕಾಗದ ನೋಂದಣಿಯಾಗಿರುವುದಿಲ್ಲ. ನಾನು ಹಂಚಿಕೆಯಾದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ

ಹಂಚಿಕೆಯಲ್ಲಿ 5 ನೇ ಪ್ರತಿವಾದಿಗೆ ರೂ.2 ಲಕ್ಷ ಹಣ ಕೊಟ್ಟಿರುತ್ತೇವೆ.

ನನ್ನ ತಂದೆ ಅಂದರೆ 1 ನೇ ಪ್ರತಿವಾದಿ ದೇಶಪಾಂಡೆ ವಕೀಲರನ್ನು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಏನು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ದೇಶಪಾಂಡೆ ವಕೀಲರ ಮುಖಾಂತರ ಹಾಜರಾಗಿ ಪ್ರತಿವಾದ ಪತ್ರ ಸಲ್ಲಿಸಿದ್ದು, ಅದಕ್ಕೆ ಸಹಿ ಕೂಡಾ ಮಾಡಿರುತ್ತಾರೆ ಎಂದರೆ, ಸಾಕ್ಷಿ ನಾನು ಶಾಲೆ ಕಲಿತಿಲ್ಲ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ತನ್ನ ಪ್ರತಿವಾದ ಪತ್ರದಲ್ಲಿ ಇವತ್ತಿನವರೆಗೂ ಹಂಚಿಕೆಯಾಗಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ರೂ.2 ಲಕ್ಷ ಹಂಚಿಕೆಯಲ್ಲಿ ಕೊಟ್ಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಎಲ್ಲ ಸ್ವತ್ತುಗಳನು ನನ್ನ ಅಜ್ಜ ಚನ್ನಬಸಪ್ಪ ಕಡೆಯಿಂದ ಬಂದ ಜಮೀನುಗಳು ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಮೊದಲು ದಾವಾ ಸ್ವತ್ತುಗಳು ಚನ್ನಬಸಪ್ಪನ ಹೆಸರಿನಲ್ಲಿ ಇದ್ದವು, ಅವರು ತಿರಿಕೊಂಡ ನಂತರ ನನ್ನ ತಂದೆ ಸಾಯಬಣ್ಣ ಹೆಸರಿನಲ್ಲಿ ಬಂದಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಗೂ ಇತರೆ ಪ್ರತಿವಾದಿಗಳು ಸೇರಿ ಶಾಮಿಲ್ ಆಗಿ ವಾದಿಯರನ್ನು ದಾವಾ ಸ್ವತ್ತಿನಿಂದ ಹೊರಗೆ ಹಾಕಬೇಕೆಂಬ ಉದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಯಾವುದೇ ಪಾಲು ಕೊಡದೇ ನಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ, ದಾವಾ ಸ್ವತ್ತಿನ ಪಹಣಿಗಳಲ್ಲಿ ನಮ್ಮ ಹೆಸರುಗಳನ್ನು ಹಚ್ಚಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಸುಳ್ಳು ಹೆಸರು ಹಚ್ಚಿಕೊಂಡು ಸದರಿ ಸುಳ್ಳು ದಾಖಲೆಗಳ ಮೇಲೆ 6 ನೇ ಪ್ರತಿವಾದಿಗೆ ಒಂದು ಸುಳ್ಳು ಕ್ರಯ ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರಿಗೆ ಹಿಸ್ಸಾ

ಸಿಗಬಾರದು ಎಂಬ ಉದ್ದೇಶದಿಂದ ಸುಳ್ಳು ಕ್ರಯ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ದಾವೆ ಚಾಲ್ತಿ ಕಾಲಕ್ಕೆ 6 ನೇ ಪ್ರತಿವಾದಿ ಮತ್ತೊಂದು ಸುಳ್ಳು ದಾಖಲೆ ಮಾಡಿಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. 1 ನೇ ವಾದಿ ತಂದೆ ಅಂಬಾರಾಯ ಮದ್ಯಪಾನ ವೆಸನಿ ಎಂದರೆ ನನಗೆ ಗೊತ್ತಿಲ್ಲ. ಅಂಬಾರಾಯನ ಹೆಂಡತಿ ಮಕ್ಕಳಿಗೆ ಏನು ಕೊಡಬಾರದು ಎಂಬ ದುರು ಉದ್ದೇಶದಿಂದ ನಾನು ಹಾಗೂ ಇತರ ಪ್ರತಿವಾದಿಗಳು ಸೇರಿ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ವಾದಿ ತಂದೆಯಾದ ಅಂಬಾರಾಯನಿಗೆ ದಾವಾ ಸ್ವತ್ತುಗಳಲ್ಲಿ 1/4 ಹಿಸ್ಸೆ ಇದೆ ಎಂದರೆ ನನಗೆ ಗೊತ್ತಿಲ್ಲ. ಅಂಬಾರಾಯನಿಗೆ 1/4 ಹಿಸ್ಸೆ ಆತನ ಹೆಂಡತಿ ಮಕ್ಕಳಿಗೆ ಹೋಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಪಾಟೀ ಸವಾಲು:**</u> <u>1 ರಿಂದ 3 ಮತ್ತು 5 ನೇ ಪ್ರತಿವಾದಿಗಳ ಪರ ವಕೀಲರಿಂದ:</u>

ನಮ್ಮ ಪಾಲು ಇದ್ದ ಹಾಗೇ ನನ್ನ ತಂದೆಯದು ಕೂಡಾ ದಾವಾ ಸ್ವತ್ತುಗಳಲ್ಲಿ ಪಾಲು ಇದೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಗೆ ಮಾರಾಟ ಮಾಡಿದ ಕ್ರಯ ಪತ್ರ ರದ್ದಾಗಬೇಕು ಎಂದರೆ ಅದು ನನಗೆ ಗೊತ್ತಿಲ್ಲ, ಅದು ಅಂಬಾರಾಯನ ಹಿಸ್ಸೆಗೆ ಹೋಗಿದೆ ಎಂದು ನುಡಿಯುತ್ತಾರೆ. ನನ್ನ ತಂದೆ-ತಾಯಿ ತಿರಿಕೊಂಡಿದ್ದರಿಂದ ಅವರ ಆಸ್ತಿಯಲ್ಲಿ ನನ್ನ ಪಾಲು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಂಚಿಕೆ ಪತ್ರದಲ್ಲಿ ನನ್ನ ತಂದೆ-ತಾಯಿ ಇರುವವರೆಗೂ ಅವರು ಉಣ್ಣಬೇಕು, ಅವರು ತಿರಿಕೊಂಡ ನಂತರ 2 ಹಿಸ್ಸೆ ಆಗಬೇಕು ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ.

**<u>ಪಾಟೀ ಸವಾಲುಃ 7 ಮತ್ತು 8 ನೇ ಪ್ರತಿವಾದಿಗಳ ಪರ ವಕೀಲರಿಂದಃ</u>**

(7 ಮತ್ತು 8 ನೇ ಪ್ರತಿವಾದಿಗಳ ಪರ ವಕೀಲರನ್ನು ಕೂಗಿಸಲಾಯಿತು ಗೈರು ಹಾಜರು ಕಾರಣ ಪಾಟೀ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

**<u>ಮರು ವಿಚಾರಣೆಃ</u>** <u>ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**